ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಸದಸ್ಯರು ಬಿಡುವುದಿಲ್ಲ, ಅವರು ಉತ್ತರವನ್ನೂ ಹೇಳುವುದಿಲ್ಲ ನಮ್ಮ ಗತಿ ಏನಾಗಬೇಕು, ನಮ್ಮ ಪ್ರಶ್ನೆಗಳೂ ಇವೆ.

ಶ್ರೀ ಎಂ ವೀರಪ್ಪ ಮೋಯಿಲಿ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಸಂಬಂಧಪಟ್ಟ ಸದಸ್ಯರು ಕರೆಯಿಸಿ ಮಾತನಾಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಕರೆಯಿಸಿ ಮಾತನಾಡುತ್ತೇನೆಂದು ಹೇಳಿದ್ದಾರಲ್ಲ.

ಅಧ್ಯಕ್ಷರು : ಈಗ ಅವರು ನಿಮ್ಮನ್ನು ಕರೆದು, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಮಾತನಾಡುತ್ತಾರೆ.

ಶ್ರೀ ಡಿ.ಎ ಚಿನ್ನಪ್ಪ : ಆಶ್ವಾಸನೆ ಕೊಟ್ಟಿಲ್ಲ, ಮಾರ್ಚ್ ಎಂಡ್ ಒಳಗಾದರೂ ಮಾಡುತ್ತೇವೆ ಎಂದು ಹೇಳಿಲ್ಲ.

(ಗೊಂದಲ)

ಶ್ರೀ ಬಿ. ಶಿವರಾಮು : ನಾನು ಹೋಗಿ ಮಾತನಾಡುವುದಕ್ಕೆ ತಯಾರಾಗಿದ್ದೇನೆ. ಆದರೆ ಎಷ್ಟು ದಿವಸದ ಒಳಗಾಗಿ ಮಾಡುತ್ತಾರೆ ಎಂಬುದು ಮುಖ್ಯ. ಎರಡು ತಿಂಗಳು ತೆಗೆದುಕೊಳ್ಳಲಿ ಮಾರ್ಚ್ ಅಲ್ಲದೇ ಹೋದರೆ ಏಪ್ರಿಲ್ ಕೊನೆಯ ಒಳಗಾಗಿ ಕೊಡುತ್ತೇವೆ ಎಂಬ ಮಾತನ್ನಾದರೂ ಹೇಳಲಿ. ನನಗೆ ಭರವಸೆ ಬೇಕು.

ಅಧ್ಯಕ್ಷರು : ರಾಮಪ್ಪನವರೇ ಏಪ್ರಿಲ್‌ವರೆಗೆ ಟೈಮ್ ತೆಗೆದುಕೊಳ್ಳಿ ನೋಡೋಣ.

ಶ್ರೀ ರಾಮಪ್ಪ : ಸ್ವಾಮಿ ಈ ವಿಷಯದಲ್ಲಿ ಮಾಡಿಕೊಡಬೇಕೆನ್ನುವ ಕಳಕಳಿ ನಮಗೆ ಇದೆ. ನಾನು ಆಫೀಸರ್ಸ್ ಜೊತೆಯಲ್ಲಿ ಸರಿ ಮಾಡೋಣ ಎಂದು ಹೇಳಿದ್ದೇನೆ ಇದೂ ಅವರಿಗೂ ಗೊತ್ತಿದೆ ಒಂದು ವೇಳೆ ಸ್ವಲ್ಪ ಲೇಟಾದರೆ ಇದೇ ಪರಿಸ್ಥಿತಿ ಮತ್ತೇ ಬಂದರೆ ನಾನೇನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಶ್ರೀ ಕೃಷ್ಣಪರಮಾತ್ಮನೇ ಉತ್ತರ ಕೊಡಬೇಕು.

ಅಧ್ಯಕ್ಷರು : ಅದಕ್ಕೆ ಎಪ್ರಿಲ್ ವರೆಗೂ ಟೈಮ್ ತೆಗೆದುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಮನ ಮೇಲೆ ವಿಶ್ವಾಸ ಇಲ್ಲದೆ ಅವರು ಕೃಷ್ಣನ ಮೇಲೆ ಹೋಗಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಒಂದು ಹಕ್ಕುಚ್ಯುತಿ ನಿರ್ಣಯ ಇದೆ. ನಾನು ಅದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಮೊನ್ನೆ ದಿವಸವೇ ಕಳುಹಿಸಿದ್ದೇವೆ. ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಬೇಕು

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇವತ್ತು ರೈತರಿಗೆ ಆಗಿರತಕ್ಕಂಥ ತೊಂದರೆ ರೈತರು ಈ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. .....

ಅಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ನೀಡುವ ಉತ್ತರಗಳ ಪಟ್ಟಿಯನ್ನು ಮುಂದೆ ಮಂಡಿಸುತ್ತೇನೆ.

ವಿದ್ಯುತ್ ಯೂನಿಟ್‌ಗಳ ಉತ್ಪಾದನೆ

44 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) ; ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ವಿದ್ಯುತ್ ಯೂನಿಟ್‌ಗಳಿಗೆ ಬೇಡಿಕೆಯಿದೆ?

ಆ) ನಮ್ಮ ರಾಜ್ಯದಲ್ಲಿ ಎಷ್ಟು ವಿದ್ಯುತ್ ಯೂನಿಟ್‌ಗಳ ಉತ್ಪಾದನೆಯಾಗುತ್ತಿದೆ?

ಇ) ಈ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಕರ್ನಾಟಕ ರಾಜ್ಯದಲ್ಲಿ ಸರಾಸರಿ ಪ್ರತೀದಿನ ವಿರುವ ವಿದ್ಯುತ್ ಬೇಡಿಕೆಯ ಪ್ರಮಾಣ 56.5 ದಶಲಕ್ಷ ಯೂನಿಟ್‌ಗಳು.

ಆ) ರಾಜ್ಯದಲ್ಲಿ ಸರಾಸರಿ ಪ್ರತೀದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ 40 ದಶಲಕ್ಷ ಯೂನಿಟ್‌ಗಳು.

ಇ) ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ವಿದ್ಯುತ್ ಪಾಲನ್ನು ಪಡೆಯಲಾಗತ್ತದೆ.

2) ಹೊಸ ವಿದ್ಯುತ್ ಉತ್ಪಾದನೆ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ.

3) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ನಗರದ ಸಮೀಪ ಇರುವ ಯಲಹಂಕದಲ್ಲಿ 127.92 ಮೇ.ವಾ. ಸಮಾರ್ಥ್ಯದ ಡೀಸೆಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಿಸುತ್ತಿದೆ.

ರಾಜಾಜಿನಗರ ಸಹಕಾರ ಸಂಸ್ಥೆಯಲ್ಲಿ ಹೂಡಿರುವ ಮೂಲಧನ

45 - ಶ್ರೀ ಕೆ. ಲಕ್ಕಪ್ಪ (ರಾಜಾಜಿನಗರ) : ಮಾನ್ಯ ಸಹಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಸಹಕಾರ ಸಂಸ್ಥೆಯು ಹೂಡಿರುವ ಮೂಲ ಧನವೆಷ್ಟು?

ಆ) ಹಾಗಿದ್ದಲ್ಲಿ ಸಂಸ್ಥೆಯವರು ಕೊಟ್ಟಿರುವ ಸಾಲದ ಮೊತ್ತವೆಷ್ಟು?

ಇ) ಆ ಸಹಕಾರ ಸಂಸ್ಥೆಯವರು 1990-91ರವರೆಗೆ ಗಳಿಸಿರುವ ಲಾಭ ಮತ್ತು ನಷ್ಟವೆಷ್ಟು? ಕಳೆದ ಮೂರು ವರ್ಷಗಳ ಮಾಹಿತಿಯನ್ನು ನೀಡುವುದು.

ಈ) ಈ ಸಂಸ್ಥೆಯು ನಷ್ಟವನ್ನು ಅನುಭವಿಸಿದ್ದಕ್ಕೆ ಕಾರಣಗಳೇನು?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ರೂ. 17,88,780-84.